

ದಾಂಪತ್ಯದಲ್ಲಿ ಸಮರಸವಷ್ಟೇ ಅಲ್ಲ, ಸಂಘರ್ಷವೂ ಇರುತ್ತದೆ. ಪತಿ ಪತ್ನಿಯರ ಅನುಬಂಧ ಗಾಢವಾಗಲು ಸಂಘರ್ಷ ಕೂಡ ಪೂರಕವಾಗುವುದಿದೆ. ಆದರೆ, ಕೆಲವು ಸಂದರ್ಭಗಳಲ್ಲಿ ಗಂಡ–ಹೆಂಡತಿಯ ಜಗಳ ಉಂಡು ಮಲಗುವವಷ್ಟಕ್ಕೆ ಕೊನೆಯಾಗದೆ ಮನಸುಗಳಲ್ಲಿ ಬಿರುಕು ಮೂಡಲು ಕಾರಣವಾಗುತ್ತದೆ. ದಂಪತಿಯ ಮುನಿಸು ಮಕ್ಕಳ ಮನಸ್ಸನ್ನೂ ಕದಡಿ, ಅವರ ಬೆಳವಣಿಗೆಯ ಮೇಲೆ ಪರಿಣಾಮ ಬೀರುತ್ತದೆ. ನಮ್ಮ ಮಾತು–ಕತೆ ಮಕ್ಕಳ ಮೇಲೆ ಯಾವ ಪರಿಣಾಮ ಬೀರಬಹುದು ಎನ್ನುವುದನ್ನು ಯೋಚಿಸದೆ ಹೋದರೆ, ಕುಟುಂಬದಲ್ಲಿ ಬಿರುಗಾಳಿ ಖಚಿತ. ಮಕ್ಕಳನ್ನು ಬೆಳೆಸುವ ನಿಟ್ಟಿನಲ್ಲಿ ಅಪ್ಪ–ಅಮ್ಮನ ಪಾತ್ರದ ಬಗ್ಗೆ ಸವಿವರ ವಿಶ್ಲೇಷಣೆ ಈ ವಾರದ 'ಸುಧಾ' ವಿಶೇಷ.

■ ಕೋಡಿಬೆಟ್ಟು ರಾಜಲಕ್ಷ್ಮಿ